## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 28.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ.5 ನೇ ಪರ ಶ್ರೀ.ವಿ ಎಸ್ ಆರ್ ವಕೀಲರಿಂದಃ**

12. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಖರೀದಿಸಲಾದ ಪ್ಲಾಟ್ ಗಳ ಸಂಖ್ಯೆಗಳನ್ನು ಹಾಗೂ ಸದರಿ ಪ್ಲಾಟ್ ಗಳ ಮಾಲೀಕರನ್ನು ಈ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಎಲ್ಲ ಪ್ಲಾಟ್ ಗಳ ವಿಷಯವಾಗಿ ನೀವು ಈ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಕಾನೂನು ಬಾಹೀರವಾಗಿ ಹಂಚಿಕೆಯಾದ ಪ್ಲಾಟ್‌ಗೆ ಸಂಬಂಧಿಸಿದಂತೆ ಮಾತ್ರ ನಾನು ಈ ದಾವೆ ಸಲ್ಲಿಸಿರುತ್ತೇನೆ. ನಾನು ಪ್ರತಿವಾದಿ ಸಂಘದ ಸದಸ್ಯನಾದ ನಂತರ ಪ್ರತಿವಾದಿಗಳು ಸಾಕಷ್ಟು ಪ್ಲಾಟ್‌ಗಳನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ನಾನು ಸಂಘದ ಸಭೆಗಳಿಗೆ ಹಾಜರಾಗುತ್ತಿದ್ದೇನು ಎಂದರೆ ಸರಿ. ಪ್ರತಿವಾದಿ ನಂ.3 ಮತ್ತು 4 ನನಗೆ ಸುಮಾರು 10-15 ವರ್ಷಗಳಿಂದ ಪರಿಚಯ. ನಾವು ಹಾಗೂ ಅವರು ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿ ನಂ.3 ಇವರ ಮಧ್ಯ ಆಗಾಗ ಜಗಳವಾಗುತ್ತಿತ್ತು ಹಾಗಾಗಿ ನಾನು ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಸಂಘದ ಆಡಳಿತ ಮಂಡಳಿಯವರ ಜೊತೆ ನಾನು ವಿನಾಕಾರಣ ಜಗಳ ತೆಗೆಯುತ್ತಿದ್ದೇನು ಹಾಗಾಗಿ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ಪ್ರತಿವಾದಿ ನಂ.3 ಮತ್ತು 4 ರವರು 2014 ರಲ್ಲಿ ಪ್ಲಾಟ್ ನಂ.1 ಮತ್ತು 2 ಖರೀದಿಸಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕಾನೂನುಬಾಹೀರವಾಗಿ ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ನಿಪಿ.4 ಖರೀದಿ ಪತ್ರಕ್ಕೆ ಎನ್ ಎ ಅತ್ತಾರ ಹಾಗೂ ಬಿ ಎ ಶೇಖ್ ಎಂಬುವವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಅವರ ಸಹಿಗಳು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. 2014 ರಿಂದ ಈ ದಾವೆ ದಾಖಲಿಸುವವರೆಗೂ ನಾನು ಪ್ರತಿವಾದಿ ನಂ.3 ಮತ್ತು 4 ರವರ ವಿರುದ್ಧ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಎ ಆರ್ ಸಿ ಎಸ್ ರವರಿಗೆ ಅರ್ಜಿ ಸಲ್ಲಿಸಿದ್ದೇನು ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ನಿಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಪ್ಲಾಟ್‌ಗಳು ಇವೆ ಎಂದರೆ ಸಾಕ್ಷಿ ಕುಟುಂಬದವರು ಅದಕ್ಕೆ ಸಂಬಂಧ ಇಲ್ಲ ಹಾಗೂ ನನ್ನ ಹೆಸರಿನಲ್ಲಿ ಪ್ಲಾಟ್ ಗಳು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.4 ಈ ದಾವೆಯಲ್ಲಿ ಪ್ರತಿವಾದಪತ್ರ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅವರು ಪ್ರತಿವಾದಪತ್ರ ಸಲ್ಲಿಸಿರುತ್ತಾರೆಂದು ಹೇಳಿ ನನ್ನ ವಕೀಲರು ನನಗೆ ತಿಳಿಸಲಿಲ್ಲ. ಚಾಟನಿ ಕಾಂಪ್ಲೆಕ್ಸ ಕಾರವಾರ ರಸ್ತೆ ಹುಬ್ಬಳ್ಳಿಯ ಮನೆ ನಂ.701 ಇದು ನಿಮ್ಮ ಸ್ವಂತ ಮನೆ ಎಂದರೆ ಸಾಕ್ಷಿ ಇಲ್ಲ ಅದು ಬಾಡಿಗೆ ಮನೆ ಎಂದು ನುಡಿಯುತ್ತಾರೆ. ನಾನು ಬಾಡಿಗೆ ಮನೆಯಲ್ಲಿ

ವಾಸವಾಗಿದ್ದೇನೆ ಹಾಗೂ ನನಗೆ ಸ್ವಂತ ಮನೆ ಇಲ್ಲ ಎಂದು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನನಗೆ ಒಂದು ಹೆಣ್ಣು ಮಗಳು ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರೆಲ್ಲರ ಹೆಸರಿನಲ್ಲಿ ಸಹ ನಾನು ಮನೆಗಳನ್ನು ಹರೀದಿಸಿ ಕೊಟ್ಟಿಸಿರುತೆತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗ ಬೇರೆಯಾಗಿ ವಾಸವಿರುತ್ತಾನೆ ಹಾಗೂ ಅವನು ಖರೀದಿಸಿರುತ್ತಾನೆಂದು ನುಡಿಯುತ್ತಾರೆ.

13. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಖರೀದಿಸಬೇಕಾದರೆ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಕೊಡುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.5 ತಾನು ಆಸ್ತಿ ಖರೀದಿಸುವ ಪೂರ್ವದಲ್ಲಿ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ನೀಡಿದ್ದರು ಎಂದರೆ ಸಾಕ್ಷಿ ನೀಡಿರಬಹುದು ಅದನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಆಸ್ತಿ ಖರೀದಿಸಿದ ನಂತರ ಪ್ರತಿವಾದಿ ನಂ.5 ತಾನು ಖರೀದಿಸಿದ ಆಸ್ತಿಯ ಉತಾರಿನಲ್ಲಿ ತಮ್ಮ ಹೆಸರು ದಾಖಲಿಸಿಕೊಂಡಿರುತ್ತಾರೆಂದರೆ ಸಾಕ್ಷಿ ಅದು ಕಾನೂನು ಬಾಹೀರವಾಗಿ ದಾಖಲಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಅದೇ ಪ್ರಕಾರ ಮಹಾನಗರ ಪಾಲಿಕೆ ನಿರ್ವಹಿಸುವ ಕಂದಾಯ ದಾಖಲೆಗಳಲ್ಲಿ ಅವರು ತಮ್ಮ ಹೆಸರು ದಾಖಲಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.5 ದಾವಾ ಆಸ್ತಿ ಉತಾರಿನಲ್ಲಿ ಮತ್ತು ಕಂದಾಯ ದಾಖಲೆಗಳಲ್ೆಲ ತಮ್ಮ ಹೆಸರನ್ನು ದಾಖಲಿಸಿಕೊಂಡಿರುವುದನ್ನು ಪ್ರಶ್ನೀಸಿ ನೀವು ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಆಗ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.5 ಇವರು ಕಾನೂನುಬದ್ಧವಾಗಿ ಆಸ್ತಿಯನ್ನು ಖರೀದಿಸಿರುವ ಕಾರಣ ನಾವು ಸಲ್ಲಿಸಿರುವ ದಾವೆ ಅವರ ಹಕ್ಕುಗಳನ್ನು ಯಾವುದೇ ರೀತಿ ಬಾಧಿತಪಡಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೆ; ಹಕ್ಕು ಹಿತಾಸಕ್ತಿ ಇಲ್ಲ ಹಾಗಾಗಿ ನಾನು ಈ ದಾವೆಯಲ್ಲಿ ಕೇಳಿಕೊಂಡ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**